ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 186-190
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸೂಳೆಕೆರೆ (ಶಾಂತಿಸಾಗರ) ಕೆರೆಯ ಸಾಂಸ್ಕೃತಿಕ ಅಧ್ಯಯನ

**ಡಾ.ಪಾರ್ವತಮ್ಮ ಎಂ**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ.

***Abstract:***
*ಪ್ರಪಂಚದ ಬಹುತೇಕ ನಾಗರಿಕತೆಗಳು ನದಿ ಪಾತ್ರಗಳ ಮೇಲೆಯೇ ಉಗಮಿಸಿವೆ, ವಿವಿಧ ಕಾರಣಗಳಿಂದ ನಂತರದ ದಿನಗಳಲ್ಲಿ ನದಿ ಪಾತ್ರಗಳನ್ನು ತೊರೆದು ಬೇರೆ ಪ್ರದೇಶಗಳಲ್ಲಿ ನೆಲೆಗೊಳ್ಳಲು ಆರಂಭಿಸಿದನು. ಇದರಿಂದಾಗಿ ನೀರನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಲು ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸುವುದು ಅವನಿಗೆ ಅನಿವಾರ್ಯವಾಯಿತು ಜಲಸಂಗ್ರಹಣೆ ಹಾಗೂ ನಿರ್ವಹಣೆಗಾಗಿ ಹಲವು ಮಾರ್ಗಗಳನ್ನು ಕಂಡುಹಿಡಿದನ್ನು, ವ್ಯರ್ಥವಾಗಿ ಹರಿದು ಹೋಗುತ್ತಿದ್ದ ಮಳೆನೀರನ್ನು ವಿವಿಧ ಜಲ ಸಂಗ್ರಾಹಗಳಲ್ಲಿ ಸಂಗ್ರಹಿಸಿ ಧೀರ್ಘಕಾಲ ಸದ್ವಿನಿಯೋಗಪಡಿಸಿಕೊಂಡನು. ಮಾನವನ ಇಂತಹ ಪ್ರಯತ್ನಗಳ ಫಲವಾಗಿ ಕೆರೆ, ಕಟ್ಟೆ, ಕುಂಟೆ, ಭಾವಿ, ಹೊಂಡ, ಕಲ್ಯಾಣಿ, ಪುಷ್ಕರಣಿಗಳ ನಿರ್ಮಾಣಗೊಳ್ಳಲು ಪ್ರಾರಂಭವಾದವು. ಪ್ರಸ್ತುತ ಲೇಖನದಲ್ಲಿ ಚನ್ನಗಿರಿ ತಾಲೂಕಿನ ಶಾಂತಿ ಸಾಗರ ಗ್ರಾಮದ ಸೂಳೆಕೆರೆಯನ್ನು ಕುರಿತು ಚಾರಿತ್ರಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ನಾಗರಿಕತೆ, ನದಿಪಾತ್ರ, ಸೂಳೆಕೆರೆ, ಜಲಸಂಗ್ರಾಹಕಗಳು*

**ಪೀಠಿಕೆ**

"ನೀರು ಜಗದ ಜೀವರಾಶಿಗಳಿಗೆ ಜೀವನಾಧಾರೆ" ಜೀವಿಗಳ ಮೂಲಭೂತ ಅವಶ್ಯಕತೆಗಳಲ್ಲಿ ನೀರು ಪ್ರಧಾನವಾದದ್ದು "ನೀರು ನಾಗರಿಕತೆಗಳ ಮೂಲ". ಪ್ರಪಂಚದ ಎಲ್ಲಾ ನಾಗರಿಕತೆಗಳು ಚಿಗುರೊಡೆದು ವಿಜೃಂಭಿಸಿರುವುದು ನದಿ ದಂಡೆಯ ಮೇಲೆಯೇ ನದಿಯ ಪಾತ್ರಗಳಲ್ಲಿ ಮಾನವ ತನ್ನ ವಸತಿಯನ್ನು ನಿರ್ಮಿಸಿಕೊಂಡು, ನದಿ ನೀರನ್ನು ತನ್ನ ಎಲ್ಲಾ ಅವಶ್ಯಕತೆಗಳಗೆ ಬಳಸಿಕೊಂಡನು. ಅಲೆಮಾರಿಯಾಗಿದ್ದ ಮಾನವ ಒಂದಡೆ ಸ್ಥಿರವಾಗಿ ನಿಂತು ವ್ಯವಸಾಯವನ್ನು ಆರಂಭಿಸಿದನು. ಕೃಷಿಗೆ ನೀರು ಅತ್ಯಗತ್ಯ. ಪ್ರಾರಂಭದಲ್ಲಿ ಕೃಷಿಗಾಗಿ ಮಳೆಯನ್ನೆ ನಂಬಿದ್ದ ಮಾನವ ನಂತರದಲ್ಲಿ ವಿಫುಲವಾಗಿ ನೀರು ಸಿಗುವ ನದಿಗಳ ತಾಣವನ್ನು ಆಶ್ರಯಿಸಿದನು ಆದರೆ ಪ್ರಾಕೃತಿಕ ಏರುಪೇರುಗಳಿಂದಾಗಿ ಅನಿಶ್ಚಿತ ಮಳೆ, ಅತೀವೃಷ್ಟಿಯಿಂದ ಉಂಟಾದ ಪ್ರವಾಹಗಳಿಂದಾಗಿ ಸಂಕಷ್ಟಕ್ಕೆ ಪದೇ ಪದೇ ಸಿಲುಕುತಿದ್ದನು. ಅಲ್ಲದೆ ಜನಸಂಖ್ಯೆಯ ಹೆಚ್ಚಳದಿಂದಾಗಿ ಮಾನವನು ನದಿ ಪಾತ್ರಗಳನ್ನು ತೊರೆದು ಇತರೆ ಪ್ರದೇಶಗಳಲ್ಲಿ ನೆಲೆಗೊಳ್ಳಲು ಆರಂಭಿಸಿದನು.

**ಸಾಹಿತ್ಯ ಅವಲೋಕನ**

ನಂದೀಶ್ ಮತ್ತು ಶಿವಪ್ರಕಾಶ್ (1997) ಇವರ ಮೀನು ಸಾಕಣೆ ತಂತ್ರಜ್ಞಾನ ಪರಿಚಯ ಎಂಬ ಲೇಖನದಲ್ಲಿ, ಸ್ವಾತಂತ್ರ್ಯ ನಂತರ ಮತ್ಸೋದ್ಯಮಕ್ಕೆ

***Please cite this article as:*** ಪಾರ್ವತಮ್ಮ ಎಂ. (2026). ಸೂಳೆಕೆರೆ (ಶಾಂತಿಸಾಗರ) ಕೆರೆಯ ಸಾಂಸ್ಕೃತಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 186–190

ಸರಕಾರದಿಂದ ದೊರೆತ ಉತ್ತೇಜನಕಾರಿ ಪ್ರೋತ್ಸಾಹದಿಂದಾಗಿ ತರಗತಿಯ ಬೆಳವಣಿಗೆ ಅಧಿಕ ಮೀನು ಉತ್ಪನ್ನ ಹಾಗೂ ಮೀನುಗಾರರ ಆರ್ಥಿಕ ಸಾಮಾಜಿಕ ಉನ್ನತ ಸಾಧ್ಯವಾಯಿತು. ಆಧುನೀಕರಣದ ಪರಿಣಾಮವಾಗಿ ರಾಜ್ಯದ ಕಡಲ ಮತ್ಸೋದ್ಯಮದಲ್ಲಿ ಪ್ರಸ್ತುತ 117 ಮಂಜುಗಡ್ಡೆ ಕಾರ್ಖಾನೆಗಳು 28 ಮೀನು ತಂಗುದಾಣಗಳು, 5 ಮೀನುಗಾರಿಕಾ ಬಂದರುಗಳು, 38 ಶೀಥಗಾರಗಳು, 22 ಶೀಥಲೀಕರಣ ಸ್ಥಾವರಗಳು, 20 ಶೀಥಿಕರಿಸಿದ ಸಂಗ್ರಹಣಾ ಕೇಂದ್ರಗಳು, 21 ಮೀನುಗೊಬ್ಬರ ಸ್ಥಾವರಗಳು, 10 ಡಬ್ಬೀಕರಣ ಘಟಕಗಳು, 4 ಮೀನೆಣ್ಣೆ ತಯಾರಿಕಾ ಸ್ಥಾವರಗಳು 164 ಕಿ.ಮೀ. ಉದ್ದದ 106 ಮೀನುಗಾರಿಕಾ ಸಂಪರ್ಕ ರಸ್ತೆಗಳು 69 ಮೀನುಗಾರಿಕಾ ಸಹಕಾರಿ ಸಂಘಗಳು ತಲೆ ಎತ್ತಿ ಅಲ್ಲಿನ ಸುಮಾರು 3,00,000 ಮೀನುಗಾರರ ಸುಸ್ತಿರ ಜೀವನಕ್ಕೂ ಆಶ್ರಯದಾಯಕವಾಗಿದೆ. ಎಂದು ಹೇಳಿದ್ದಾರೆ.

ಡಾ. ಕೆ.ಮಂಜಪ್ಪ (2009) ಕೆರೆಗಳಲ್ಲಿ ಮೀನು ಸಾಕಣಿಕೆ–ಕೈಪಿಡಿ ಎಂಬ ಲೇಖನದಲ್ಲಿ ರಾಜ್ಯದಲ್ಲಿ 6000 ದೊಡ್ಡಕೆರೆಗಳು ಹಾಗೂ 20,000 ಸಣ್ಣ ಕೆರೆಗಳು ಸೇರಿ 2.93 ಲಕ್ಷ ಹೆಕ್ಟೇರ್‌ನಷ್ಟು ನೀರಿನ ವಿಸ್ತೀರ್ಣವಿರುತ್ತದೆ. ಸುಮಾರು 2000 ಹೆಕ್ಟೇರ್‌ಗೂ ಅಧಿಕ ನೀರಿನ ವಿಸ್ತೀರ್ಣದಲ್ಲಿ ಖಾಸಗಿ ಮೀನು ಕೃಷಿಕರು ತಮ್ಮ ಮೀನು ಕೊಳಗಳಲ್ಲಿ ಮೀನು ಸಾಕಣೆ ಮಾಡುವುದು ಕಂಡುಬರುತ್ತದೆ ಎಂದಿದ್ದಾರೆ.

### ಅಧ್ಯಯನದ ಉದ್ದೇಶಗಳು

- ಸೂಳೆಕೆರೆಯ ಪರಿಚಯವನ್ನು ತಿಳಿಯುವುದು.
- ಸೂಳೆಕೆರೆಯ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯುವುದು.
- ಸೂಳೆಕೆರೆಯ ಮಹತ್ವವನ್ನು ತಿಳಿಯುವುದು

ಚನ್ನಗಿರಿ ತಾಲೂಕಿನ ಜಲಾಶಯಗಳಿಗೆ ಸಂಬಂಧಸಿದಂತೆ ಸೂಳೆಕರೆಯ ಬಗ್ಗೆ ಇದುವರೆಗೂ ಕೆಲವು ಅಧ್ಯಯನಗಳು ನಡೆದಿದ್ದು ಅವುಗಳು ಐತಿಹಾಸಿಕ ಲೇಖನಗಳಲ್ಲಿ, ಸಂಪಾದಿತ ಕೃತಿಗಳಲ್ಲಿ ಸಂಶೋಧನಾ ಲೇಖನಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಆದರೆ ಇವು ವ್ಯವಸ್ಥಿತವಾದ ವಿವರಣಾತ್ಮಕ ಸಮಗ್ರ ಪರಿಚಯ ಎಲ್ಲಿಯೂ ಆಗಿಲ್ಲ ಹೀಗಾಗಿ ಚನ್ನಗಿರಿ ತಾಲೂಕಿನ ಸೂಳೆಕೆರೆ ಕಿರುಪರಿಚಯವನ್ನು ಮಾಡಿಕೊಡುವ ಚಿಕ್ಕ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

### ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನದಲ್ಲಿ ಚನ್ನಗಿರಿ ತಾಲೂಕಿನ ಸೂಳೆಕೆರೆಯ ಪರಿಚಯ ಮತ್ತು ಕೆರೆಯ ವಿಸ್ತೀರ್ಣ, ಜಲಾವೃತ ಪ್ರದೇಶ, ಕೆರೆಯ ಸಾಮರ್ಥ್ಯ, ಅಚ್ಚುಕಟ್ಟು ಪ್ರದೇಶ, ಜಲಾನಯನ ಪ್ರದೇಶ, ತೂಬಿನ ರಚನೆ ಮುಂತಾದ ಅಂಶಗಳನ್ನು ತಿಳಿಯಬಹುದು. ಅಷ್ಟೇ ಅಲ್ಲದೇ ಕೆರೆಯ ಸದ್ಬಳಕೆಯಿಂದ ಪ್ರಸ್ತುತ ಕೃಷಿ ಬೆಳವಣಿಗೆ, ಪ್ರವಾಸೋದ್ಯಮ ಮತ್ತು ಕೆರೆಯಲ್ಲಿ ಮೀನು ಸಾಕಾಣಿಕೆ ಮಾಡಿ ಹೇಗೆ ಆರ್ಥಿಕ ಪ್ರಗತಿ ಸಾಧಿಸಬಹುದು ಎಂಬುದನ್ನು ತಿಳಿಯಬಹುದಾಗಿದೆ.

### ಅಧ್ಯಯನದ ವಿಧಾನಗಳು

ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮೂಲಗಳಾದ ಗ್ರಂಥಗಳು, ನಿಯತಕಾಲಿಕೆಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ವರದಿಗಳು, ಕೈಪಿಡಿಗಳು ಹಾಗೂ ಅಂತರ್ಜಾಲದ ಮುಖಾಂತರ ವಿಷಯ ಸಂಗ್ರಹಣೆ ಮಾಡಲಾಗಿದೆ.

### ಸೂಳೆಕೆರೆಯ ಚಾರಿತ್ರಿಕ ಹಿನ್ನೆಲೆ

ಪ್ರಾಚೀನ ಕಾಲದಲ್ಲಿ ಕೆರೆ ಕಾಲುವೆಗಳನ್ನು ನಿರ್ಮಿಸುವುದು ಧರ್ಮಕಾರ್ಯವೆಂದು ಭಾವಿಸಲಾಗಿತ್ತು. ಮಹಾಭಾರತದ ಅನುಶಾನಿಕ ಪರ್ವವು ಮಹಾರಾಜನಾದವನು ಕೈಗೊಳ್ಳಬೇಕಾದ ಪ್ರಜಾಹಿತಾತ್ಮಕ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವು ಒಂದು ಎಂದು ತಿಳಿಸುತ್ತದೆ.

***"ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ"***

*ಮಾಡಿಸಜ್ಜೆರೆಯಾಳ್ಲಿಲ್ಕದ ನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ*

*ನಂಬಿದರ್ಗ್ಗರವಟ್ಟಾಗಿರು ಶಿಷ್ಟರಂ ಪೂರೆಯೆನುಸುತ್ತಿತಲ್ಲದಂ*

*ವೆಂದ ತಾಂಯರದಳ್ಳಾರವಂದು ತೂಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾಃ"*

ಮೇಲೆ ಉಲ್ಲೇಖಿಸಿದ ಪದವನ್ನು ವಿಜಯ ನಗರ ಅರಸ ಪ್ರೌಢ ಪ್ರತಾಪದೇವರಾಯನ (ಕ್ರಿ.ಶ. 1406–1422) ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ, ಅವನ ತಾಯಿ ಅವನಿಗೆ ಹಾಡಿ ಹಾಲೆರೆಯುತ್ತಿದ್ದಳೆಂದು ಹಂಪೆಯ ಕಡಲೆಕಾಳು ಗಣಪತಿ ಗುಡಿಯ ಮುಂದಿನ ಅಗಸೆಯಲ್ಲಿರುವ ಕ್ರಿ.ಶ.1411 ಶಾಸನವು ತಿಳಿಸುತ್ತದೆ. ಹೀಗೆ ಭಾರತದಲ್ಲಿ ಅನೇಕ ರಾಜಮಹಾರಾಜರು, ಪುಣ್ಯಪುರುಷರು ಧರ್ಮಾತ್ಮರು, ದಂಡನಾಯಕರು ಹಲವಾರು ಜಲಸಂಗ್ರಾಹಕಗಳನ್ನು ನಿರ್ಮಿಸಿರುವುದು ಕಂಡು ಬರುತ್ತವೆ, ದಕ್ಷಿಣ ಭಾರತವು ಉತ್ತರ ಭಾರತಕ್ಕಿಂತ ಅತೀ ಹೆಚ್ಚಿನ ಕೆರೆಗಳನ್ನು ಹೊಂದಿದೆ. ನಮ್ಮ ರಾಜ್ಯವು ಇದಕ್ಕೆ ಹೊರತಲ್ಲ. ಕರ್ನಾಟಕದಲ್ಲಿ ಸುಮಾರು 30,000ಕ್ಕೂ ಹೆಚ್ಚು ಕೆರೆಗಳಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕು ಕೇಂದ್ರದಿಂದ ಉತ್ತರಕ್ಕೆ 20 ಕಿ.ಮೀ ದೂರದಲ್ಲಿರುವ ಒಂದು ಕೆರೆ. ಈ ಕೆರೆ ಸುತ್ತಳತೆ 64 ಕಿ.ಮೀ ಗಳು ಈ ಕೆರೆ ದಕ್ಷಿಣ ಭಾರತದ ಎರಡನೇ ಹಾಗೂ ಕರ್ನಾಟಕದ ದೊಡ್ಡ ಕೆರೆ. ಸ್ಥಳೀಯ ದಾಖಲೆಗಳ ಪ್ರಕಾರ ವಿಜಯನಗರ ಪೂರ್ವದಲ್ಲಿಯೇ ನಿರ್ಮಾಣವಾಗಿರುವ ಈ ಕೆರೆ ಪ್ರಾಚೀನ ತಂತ್ರಜ್ಞಾನದ ಹೆಮ್ಮೆಗಳಲ್ಲೊಂದು. ಹಿರೇಹಳ್ಳ, ಸೊಪ್ಪಿನ ಹಳ್ಳ ಮಾವಿನ ಹೊಳೆ, ಎಂದೆಲ್ಲಾ ಈಗ ಕರೆಯುತ್ತಿರುವ ಹಳ್ಳಿಗಳಿಗೆ ಹಿಂದೆ ಹರಿದ್ರಾ, ಹರಿದ್ರಾವತಿ, ಎಂದು ಕರೆಯಲ್ಪಡುತ್ತಿದ್ದು ಈ ಹೊಳೆಗೆ ಸೂಳೆಕೆರೆ ಬಳಿ ಸಿದ್ದೇಶ್ವರ ಗುಡ್ಡ, ಕರೇ ಗುಡ್ಡ ಎಂಬ ಎರಡು ಗುಡ್ಡಗಳ ಮಧ್ಯೆ ಬೃಹತ್ ಒಡ್ಡು ಕಟ್ಟು ಹಾಕಿ ನೀರು ನಿಲ್ಲುವಂತೆ ಮಾಡಲಾಗಿದೆ. ಇದಕ್ಕೆ ಎರಡು ತೂಬುಗಳಿದ್ದು ಉತ್ತರ ದಿಕ್ಕಿನ ಒಂದು ತೂಬಿಗೆ ಸಿದ್ಧನ ತೂಬು, ನೀರು ಹರಿಯುವ ಕಾಲುವೆಗೆ ಬಸವನ ನಾಲೆ ಎಂತಲೂ ಕರೆಯಲಾಗುತ್ತದೆ. 1.762.5 ಹೆಕ್ಟೇರ್ ಜಮೀನಿಗೆ ಈ ಕೆರೆಯ ನೀರು ಉಣಿಸಲಾಗುತ್ತಿದ್ದು. ಸುಮಾರು 28 ಹಳ್ಳಿಗಳ ಜಮೀನಿಗೆ ನೀರಾವರಿ ಈ ಕೆರೆಯಿಂದ ಉಂಟಾಗಿದೆ. ಈಚೆಗೆ ಮಳೆಗಾಲ ಕಮ್ಮಿಯಾಗಿ ಹಿಂದೆ ಮಳೆಯಿಂದ ಸಂಗ್ರಹವಾಗುತ್ತಿದ್ದ ಕೆರೆಯ ನೀರು ಕಡಿಮೆ ಆದ ಕಾರಣ ಈಚೆಗೆ ಭದ್ರಾಬಲ ದಂಡೆಯ ನೀರನ್ನು ಈ ಕೆರೆಗೆ ಸಂಪರ್ಕಿಸಿರುವುದರಿಂದ ಇದರ ಸಾಮರ್ಥ್ಯ ಇನ್ನೂ ಹೆಚ್ಚಾಗಿದೆ. 27 ಅಡಿ ಎತ್ತರದ ಎರಡು ತೂಬುಗಳಿಗೆ ಮೊದಲಿನ ಮರದ ಬಿರಡೆ ತೆಗೆದು ಕಬ್ಬಿಣದ ಬಿರಡೆ ಹಾಕಿದ್ದು, 2.71 ಟಿ.ಎಂ.ಸಿ. ನೀರನ್ನು ಸೆರೆ ಹಿಡಿದುಕೊಳ್ಳುವ ಸಾಮರ್ಥ್ಯ ಈ ಕೆರೆಗಿದೆ.




ಈ ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನೇಕ ಪುರಾಣಗಳು, ದಂತಕಥೆಗಳು ಪ್ರಚಲಿತದಲ್ಲಿವೆ. ಹದಿನೇಳನೇ ಶತಮಾನದಲ್ಲಿಯೇ ಸೂಳೆಕೆರೆ ಸಾಂಗತ್ಯ ಮತ್ತು ಸೂಳೆಕೆರೆ ಪುಣ್ಯ ಕ್ಷೇತ್ರ ನಿವಾಸ ಎಂದು ಹೊಗಳಿವೆ. ಜನರಲ್ ಮೆಕೆಂಜಿ ಸಂಗ್ರಹಿಸಿರುವ ಸೂಳೆಕೆರೆ ಕೈಫಿಯತ್ತಿನಿಂದಲೂ ಹಲವಾರು ವಿಚಾರಗಳು ಈ ಕೆರೆ ಬಗ್ಗೆ ನಮಗೆ ತಿಳಿದು ಬರುತ್ತದೆ. ಇದಲ್ಲದೆ ಸ್ವರ್ಗಾವತಿ ಪಟ್ಟಣದ ಕೈಫಿಯತ್ತು ಎಂಬ ಇನ್ನೊಂದು ಕೈಫಿಯತ್ತು ಜನರಲ್ ಮೆಕೆಂಜಿಯವರು ಸಂಗ್ರಹಿಸಿದ್ದರೆನ್ನಲಾಗಿದ್ದು[2]. ಆ ಕೈಫಿಯತ್ತು ದೊರೆಯದೆ ಇನ್ನೂ ಹೆಚ್ಚಿನ ಮಾಹಿತಿ ತಿಳಿಯಲಾಗುತ್ತಿಲ್ಲ. ಈ ಕೆರೆಗೆ ಸಂಬಂಧ ಪಟ್ಟಂತೆ ದಂತ ಕಥೆ ಹೀಗಿದೆ. ಈಗ ಸೂಳೆಕೆರೆ ಇರುವ

ಸ್ಥಳದಲ್ಲಿ ಸ್ವರ್ಗಾವತಿ ಎಂಬ ಪಟ್ಟಣವಿತ್ತು. 11–12ನೇ ಶತಮಾನದಲ್ಲಿ ರಾಜ ವಿಕ್ರಮರಾಯ ಎಂಬುವನು ಆಡಳಿತ ನಡೆಸುತ್ತಿದ್ದನು. ಅವನ ರಾಣಿ ನೂತನ ದೇವಿ. ಅವರಿಗೆ ಬಹಳ ದಿನಗಳಾದರೂ ಮಕ್ಕಳಾಗಲಿಲ್ಲ. ತನ್ನ ಆರಾಧ್ಯ ದೈವ ಸಿದ್ದೇಶ್ವರನನ್ನು ಕುರಿತು ತಪಸ್ಸು ಮಾಡಿದಾಗ ಅವರಿಗೆ ಒಂದು ಹೆಣ್ಣು ಮಗು ಕರುಣಿಸಿದನೆಂದು ಅವಳಿಗೆ ಶಾಂತವ್ವ ಎಂದು ನಾಮಕರಣ ಮಾಡಲಾಯಿತೆಂದೂ ಹೇಳಲಾಗಿದೆ. ಆಕೆಯನ್ನು ಶಾಂತಲಾ ಪರಮೇಶ್ವರ ಎಂದೂ ಕರೆಯುತ್ತಾರೆ. ಪ್ರೌಢ ವಯಸ್ಸಿಗೆ ಅವಳು ಬಂದಾಗ ತಂದೆ ಅವಳಿಗೆ ಮದುವೆ ಮಾಡಲು ಬೇರೆ ಯಾರೊಂದಿಗೂ ಮದುವೆ ಆಗುವುದಿಲ್ಲ ಎಂದು ಹಠಹಿಡಿದು ಹಗಲು ರಾತ್ರಿ ಅಲ್ಲಿಯೇ ಇರುವ ಸಿದ್ದೇಶ್ವರನ ಮಂದಿರದಲ್ಲಿ ಇರುತ್ತಿರಲಾಗಿ, ಅವಳ ಭಕ್ತಿಗೆ ಪರಶಿವನು ಮೆಚ್ಚಿ ಮನುಷ್ಯ ಜಾತಿಯಲ್ಲಿ ಬಂದು ಆಕೆಯ ಸಂಗಡ ಹಗಲು ರಾತ್ರಿ ಕಾಲ ಕಳೆಯುತ್ತಿದ್ದನೆಂದು, ಹೋಗುವಾಗ ಆತ ತನ್ನ ಬೊಂತೆ ಕೊಡವಿ ಹೋದಾಗ ಬಹಳ ಸುವರ್ಣ ವರಾಹಗಳು ನಿತ್ಯ ಹಾಸಿಗೆಯಲ್ಲಿ ಬೀಳುತ್ತಿದ್ದವೆಂದೂ, ಈ ವರಾಹಗಳನ್ನೆಲ್ಲ ಆಕೆ ಕೂಡಿಹಾಕಿ ಸ್ತ್ರೀ ಜನ್ಮ ಸ್ಥಿರವಲ್ಲ ಮುಂದೆ ತನ್ನ ಹೆಸರುಳಿಯಬೇಕೆಂದು ಈ ಕೆರೆ ಕಟ್ಟಿಸಿದಳೆಂದು ಹೇಳಲಾಗುತ್ತದೆ.

ಈ ಶಾಂತವ್ವ ಅಕ್ರಮವಾಗಿ ದೇವ ಪುರುಷರೊಂದಿಗೆ ಸಂಬಂಧ ಬೆಳೆಸಿ ಹಣ ಗಳಿಸಿದ್ದಕ್ಕಾಗಿ ಆಕೆಯ ತಂದೆಯೇ ಆಕೆಯನ್ನು ಸೂಳೆ ಎಂದು ಕರೆದನೆಂದು ಆಕೆ ಕಟ್ಟಿದ ಕೆರೆಯೇ ಸೂಳೆಕೆರೆ ಎಂದಾಯಿತೆಂದೂ ಇತಿಹಾಸ ತಿಳಿಸುತ್ತದೆ. ಆದರೆ ಕೆರೆ ಆಕೆ ಕಟ್ಟಿದ್ದರೂ ಬಹಳ ಕಾಲ ಅದರಲ್ಲಿ ನೀರು ನಿಲ್ಲದಿದ್ದ ಕಾರಣ ಆಕೆಯೇ ಅದರಲ್ಲಿ ಆತ್ಮಾರ್ಪಣೆ ಮಾಡಿಕೊಂಡು ಬಲಿ ಕೊಟ್ಟ ಮೇಲೆ ಅಲ್ಲಿ ನೀರು ನಿಂತಿತೆಂದು ಹೇಳಲಾಗುತ್ತದೆ. ಮೊದಲು ಅದಕ್ಕೆ ಒಂದು ತೂಬು ಮಾತ್ರ ನಿರ್ಮಾಣ ಮಾಡಿ, ಅದಕ್ಕೆ ಸಿದ್ದನ ತೂಬು ಎಂದು ಹೆಸರಿಡಲಾಗಿತ್ತಂತೆ. ಮುಂದೆ ಏನೋ ಕಾರಣ ಆ ಕೆರೆ ಒಡ್ಡು ಒಡೆದು ನೀರು ನಿಲ್ಲದೆ ಇತ್ತು. ವಿಜಯನಗರ ಅರಸು ಹರಿಹರ ದೇವ ಮಹಾರಾಯರು ಆಡಳಿತ ನಡೆಸುತ್ತಿದ್ದಾಗ. ಕ್ರಿ.ಶ 1316ನೇ ಈಶ್ವರ ಸಂವತ್ಸರದಲ್ಲಿ ಅವರ ಪ್ರಧಾನಿ ಬಸವ ಢಣಾಯಕರು ರಾಜ್ಯ ಮಾಡುವ ವಿಚಾರ ಮಾಡುವ ಉದ್ದೇಶ ಈ ಸ್ಥಳಕ್ಕೆ ಬಂದು ನೋಡಿದಾಗ, ಕೆರೆ ಒಡ್ಡು ಒಡೆದು ನೀರು ನಿಲ್ಲದಿರುವುದನ್ನು ಗಮನಿಸಿ, ಒಡೆದ ಕೆರೆ ಏರಿ ರಿಪೇರಿ ಮಾಡಿಸಿ, ಆ ಜಾಗದಲ್ಲಿ ತಮ್ಮ ಹೆಸರಿನಲ್ಲಿ ಒಂದು ತೂಬು ಕಟ್ಟಿಸಿ ನೀರು ನಿಲ್ಲುವಂತೆ ಮಾಡಿದರೆಂದು, ಅದಕ್ಕಾಗಿಯೇ ಅದನ್ನು ಬಸವನ ತೂಬು ಎಂದು ಕರೆಯಲಾಗುತ್ತದೆಂದು ಕೈಫಿಯತ್ತಿನ ಉಲ್ಲೇಖ ತಿಳಿಸುತ್ತದೆ.

ಸ್ಥಳೀಯ ಪುರಾಣಗಳ ಪ್ರಕಾರ ರಾಮಗಿರಿ ಪರ್ವತದಿಂದ ಹುಟ್ಟಿ ಬಂದ ಹರಿದ್ರಾವತಿ ನದಿಗೆ ಶಾಂತವ್ವೆ ಅಡ್ಡ ಕಟ್ಟೆ ಹಾಕಿ, ಕೆರೆ ನಿರ್ಮಿಸುವಾಗ ಅಲ್ಲಿದ್ದ ಸ್ವರ್ಗಾವತಿ ಪಟ್ಟಣದ ಸೂಳೆಯರಕೇರಿ ಅದರಲ್ಲಿ ಮುಳುಗಿ ಹೋಯಿತಯೆಂದು, ಅವರು ಅದರ ಪರಿಹಾರವಾಗಿ ತಾಯಮ್ಮ ಹೆಸರನ್ನು ಆ ಕೆರೆಗೆ ಇಡಬೇಕೆಂದು ಕೇಳಿಕೊಂಡ ಮೇರೆಗೆ ಶಾಂತವ್ವೆ ಒಪ್ಪಿ ಅದಕ್ಕೆ ಸೂಳೆಕೆರೆ ಎಂದು ಹೆಸರಿಡಲಾಯಿತೆಂದು ಹೇಳುತ್ತದೆ.



ಕೆರೆಯ ಸಿದ್ಧನ ನಾಲೆಯ ಬಲಕ್ಕೆ ಗುಡ್ಡದ ಮೇಲೆ 13–14ನೇ ಶತಮಾನದಲ್ಲಿ ನಿರ್ಮಿಸಿದ ಸಿದ್ದೇಶ್ವರ ದೇವಾಲಯವಿದೆ. ಈ ದೇವಾಲಯ ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳನ್ನು ಹೊಂದಿದ್ದು, ಮಹಾದ್ವಾರದ ಒಳಗೆ ಜಗಲಿ ಇದ್ದು, ದೇವಾಲಯವು ಹೊಯ್ಸಳ ಮತ್ತು ಕೆಳದಿ ಅರಸರ ಕಾಲದ ವಾಸ್ತು

ರಚನೆಯನ್ನು ಒಳಗೊಂಡಿದೆ. ಈ ದೇವಸ್ಥಾನದ ಒಳಗೆ ಒಂದು ಪುರಾತನ ಕೇಶವ ವಿಗ್ರಹ ಹಾಗೂ ವೀರಗಲ್ಲು ಇದೆ. ಈ ಮುಖ್ಯ ದೇವಾಲಯದ ಮುಂದೆ ಮೂರು ಶಿಲಾ ಶಾಸನಗಳಿದ್ದು ಅದರಲ್ಲಿ ಒಂದನ್ನು ಬಿ.ಎಲ್. ರೈಸರು ಕ್ರಿ.ಶ 1439 ನೆಯ ಈಶ್ವರ ಸಂವತ್ಸರವೆಂದು ಗುರುತಿಸಿದ್ದಾರೆ. ಇನ್ನೆರಡು ಸವೆದು, ಸುಣ್ಣ, ಬಣ್ಣ ಬಳಿದಿರುವುದರಿಂದ ಅವುಗಳನ್ನು ಗುರುತಿಸಲಾಗುತ್ತಿಲ್ಲ. ದೇವಸ್ಥಾನದ ಕೆಳಗೆ ಶೇಷಶಾಯಿ ವಿಷ್ಣುವಿನ ವಿಗ್ರಹವಿದೆ. ಅದನ್ನು ಸ್ಥಳೀಯರು ಅಣ್ಣ–ತಂಗಿ ವಿಗ್ರಹ ಎಂದು ತಪ್ಪಾಗಿ ಕರೆಯುತ್ತಾರೆ. ಶಿವರಾತ್ರಿ ಸಮಯದಲ್ಲಿ ಸಿದ್ದೇಶ್ವರ ದೊಡ್ಡ ಜಾತ್ರೆ ಕಾರ್ಣಿಕ ಇಲ್ಲಿ ನಡಯುತ್ತದೆ. ಇಲ್ಲಿನ ಭದ್ರಾನಾಲೆ ತೆಗೆಯುವ ಕಾಲದಲ್ಲಿ ರಸವೈದ್ಯ ಸಿದ್ಧರ ಸಮಾಧಿಗಳು, ಅವರು ಉಪಯೋಗಿಸುತ್ತಿದ್ದ ನಾನಾ ಬಗೆಯ ಪೂಜಾ ಸಾಮಾಗ್ರಿಗಳು ಮತ್ತು ಅವರು ರಸಮೂಲಿಕಾ ಪ್ರಯೋಗದಿಂದ ಚಿನ್ನವನ್ನು ತಯಾಸುತ್ತಿದ್ದ ಹಲವಾರು ನಾನಾ ಗಾತ್ರ ಮೂಸೆಗಳು ದೊರೆತಿದ್ದು, ಈಗ ಅವೆಲ್ಲ ಶಿವಮೊಗ್ಗದ ಪ್ರಾಚ್ಯ ವಸ್ತು ಸಂಗ್ರಾಹಾಲಯದಲ್ಲಿ ಇರಿಸಲಾಗಿದೆ. ಈ ಕಪಾಲಿ ಪಂಥದ ಸಿದ್ಧರ ಜೊತೆಗೆ ಸಂಬಂಧ ಬೆಳೆಸಿಕೊಂಡಿರುವ ಸಾಧ್ಯತೆ ಇದೆ. ಜನರು ಇದನ್ನೇ ಮಹಾದೇವ ಹೇಗೆ ಇರಲಿ ಶಾಂತವ್ವ ಇಲ್ಲಿನ ಕೆರೆ ಕಟ್ಟಿಸಿದ ಬಗ್ಗೆ ಎರಡು ಮಾತಿಲ್ಲ. ಸಿದ್ದೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಎರಡು ಗುಡ್ಡಗಳಿಗೆ ಸೇರಿಸಿ, ಭದ್ರಾ ನಾಲಾ, ಅಕ್ವಿಡಿಟ್(ತೂಗು ಸೇತುವೆ) ನಿರ್ಮಾಣ ಮಾಡಲಾಗಿದ್ದು, ಅಲ್ಲಿ ಒಂದು ಮೀನುಗಾರಿಕೆ ಕೇಂದ್ರವನ್ನು ಸ್ಥಾಪಿಸಲಾದೆ. ಇಲ್ಲಿ ಒಂದು ಪ್ರವಾಸಿ ಮಂದಿರವಿದೆ. ರಾಜ್ಯ ಸರ್ಕಾರ ಇದನ್ನು ರಾಜ್ಯದ ಪ್ರವಾಸಿ ತಾಣವನ್ನಾಗಿ ಮಾಡುವ ಯೋಜನೆ ಸರ್ಕಾರ ಹಾಕಿಕೊಂಡಿದೆ. ಕೆಲಕಾಲ ಈ ಸ್ಥಳಕ್ಕೆ ಶಾಂತಿಸಾಗರ ಎಂದು ಕರೆಯಲಾಗುತ್ತಿದ್ದು, ಇದನ್ನು ಮತ್ತೆ ಸೂಳೆಕೆರೆ ಎಂದು ಪುನರ್ ನಾಮಕರಣ ಮಾಡಲಾಗಿದೆ.

**ಉಪಸಂಹಾರ**

ಒಟ್ಟಾರೆ, ಚನ್ನಗಿರಿ ತಾಲೂಕಿನ ಸೂಳೆಕೆರೆಯು ಪ್ರಾಚೀನ ಕಾಲದ ಕೆರೆಯಾಗಿದ್ದು, ಕೃಷಿ ಮತ್ತು ಮೀನುಗಾರಿಕೆಗೆ ಅತ್ಯಂತ ಹೆಚ್ಚಿನ ಕೊಡುಗೆ ನೀಡಿದೆ. ಈ ಕೆರೆಯಿಂದಾಗಿ ಶಾಂತಿಸಾಗರ ಗ್ರಾಮದ ಜನರು ಮಾತ್ರವಲ್ಲದೆ ಉಳಿದ ಅಕ್ಕಪಕ್ಕದ ಗ್ರಾಮದ ಜನರು ಕೂಡ ಪ್ರಯೋಜನ ಪಡೆದುಕೊಳ್ಳುತ್ತಿದ್ದು, ಸೂಳೆಕೆರೆಯು ಜನತೆಯ ಜೀವನಾಡಿಯಾಗಿದೆ.

**ಆಕರ ಗ್ರಂಥಗಳು**


- ಚಿದಾನಂದಮೂರ್ತಿ, ಎಂ. (2002). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನಬುಕ್ ಹೌಸ್.
- ಚನ್ನಬಸಪ್ಪ ಎಸ್. ಪಾಟೀಲ್ (2000). *ಕರ್ನಾಟಕ ಕೋಟೆಗಳು ಸಂಪುಟ–01.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ದೀಕ್ಷಿತ್ ಜೆ.ಎಸ್., ಕುಪ್ಪಸ್ವಾಮಿ ಜಿ.ಆರ್., ಎಸ್.ಕೆ.ಮೋಹನ್. (2000). *ಕರ್ನಾಟಕದಲ್ಲಿ ಕೆರೆ ನೀರಾವರಿ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ.
- ರಾಜಾರಾಮ ಹೆಗಡೆ (2002). *ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.